ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಸಿವಿಲ್ ಸೇವೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ನೇರ ನೇಮಕಾತಿ ಮತ್ತು ಮುಂಬಡ್ತಿಯಲ್ಲಿ ಮೀಸಲಾತಿ ಒದಗಿಸಲು ನಿಗದಿಗೊಳಿಸಲಾಗಿರುವ ನೇರ ನೇಮಕಾತಿಯ ಪ್ರಮಾಣ ಶೇಕಡ 66 2/3 ಅನ್ನು ಪರಿಷ್ಕರಿಸುವ ಬಗ್ಗೆ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 23(ii) ಸೇನೆನಿ 2015, ಬೆಂಗಳೂರು, ದಿನಾಂಕ:4.03.2015**

**ಓದಲಾಗಿದೆ:-**

1. ದಿನಾಂಕ 27.4.1978ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77
2 ದಿನಾಂಕ 1.6.1978ರ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77
3. ಸರ್ಕಾರಿ ಆದೇಶ ಸಂಖ್ಯೆ. ಡಿಪಿಎಆರ್ 22 ಎಸ್‌ಬಿಸಿ 79 ದಿನಾಂಕ. 30.08.1979.

**ಪ್ರಸ್ತಾವನೆ:-**

ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ 27.4.1978ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ನೀಡುವ ಮುಂಬಡ್ತಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳಿಗೆ ಅನುಕ್ರಮವಾಗಿ ಶೇಕಡ 15 ಮತ್ತು ಶೇಕಡ 3ರ ಪ್ರಮಾಣದಲ್ಲಿ ಮೀಸಲಾತಿ ಒದಗಿಸಲಾಗಿದೆ. ಈ ಮೀಸಲಾತಿಯನ್ನು ಜಾರಿಗೊಳಿಸಲು 33 ಬಿಂದುಗಳ ರೋಸ್ಟರನ್ನು ನಿಗದಿಪಡಿಸಲಾಗಿದೆ. ಈ ರೋಸ್ಟರ್‌ನ್ನು ಮೇಲಿನ ಕ್ರ.ಸಂ. (3)ರ ಸರ್ಕಾರದ ಆದೇಶದಲ್ಲಿ ಮಾರ್ಪಡಿಸಲಾಗಿದೆ.

ಮೇಲೆ ಕ್ರಮ ಸಂಖ್ಯೆ:(2)ರಲ್ಲಿ ಓದಲಾದ ದಿನಾಂಕ 1.6.1978ರ ಅಧಿಕೃತ ಜ್ಞಾಪನ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77ರಲ್ಲಿ ಮುಂಬಡ್ತಿ ಮೀಸಲಾತಿಯನ್ನು ಜಾರಿಗೊಳಿಸಲು ಮಾರ್ಗಸೂಚಿಗಳನ್ನು ನಿಗದಿಪಡಿಸಲಾಗಿದೆ.

ದಿನಾಂಕ: 27.4.1978ರ ಸರ್ಕಾರದ ಆದೇಶದಲ್ಲಿ ಯಾವುದೇ ವೃಂದದಲ್ಲಿ ನೇರ ನೇಮಕಾತಿ ಪ್ರಮಾಣವು ಶೇ.66 2/3 ರಷ್ಟನ್ನು ಮೀರಿದಲ್ಲಿ ಅಂತಹ ವೃಂದದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಬಡ್ತಿಯಲ್ಲಿ ಮೀಸಲಾತಿ ಅನ್ವಯಿಸುವುದಿಲ್ಲವೆಂದು ನಿಗದಿಪಡಿಸಿರುವುದರಿಂದ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮುಂಬಡ್ತಿಯಲ್ಲಿ ಮೀಸಲಾತಿಯನ್ನು ನೀಡುವಾಗ ತಾರತಮ್ಯತೆ ಮಾಡಿದಂತಾಗಿದೆ ಎಂದು ತಿಳಿಸಿ, ಬಡ್ತಿಗೆ ನಿಗದಿಪಡಿಸಲಾಗಿರುವ ಶೇ.66 2/3 ಮತ್ತು ಶೇ.33 1/3ರ ಮಿತಿಯ ನಿರ್ಬಂಧವನ್ನು ತೆಗೆದುಹಾಕಿ ತಿದ್ದುಪಡಿ ಆದೇಶವನ್ನು ಹೊರಡಿಸುವಂತೆ ಸಮಾಜ ಕಲ್ಯಾಣ ಇಲಾಖೆಯು ಪ್ರಸ್ತಾಪಿಸಿರುತ್ತದೆ.

ಈ ಅಂಶದ ಬಗ್ಗೆ ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದೆ. ಭಾರತ ಸರ್ಕಾರವು ಅನುಸರಿಸುತ್ತಿರುವ ಪದ್ಧತಿಯಂತೆ ನೇರ ನೇಮಕಾತಿಯಲ್ಲಿನ ಪ್ರಮಾಣವನ್ನು ಶೇಕಡ.75ಕ್ಕೆ ನಿಗದಿಗೊಳಿಸಿ, ಅದನ್ನು ಮೀರದ ಪ್ರಕರಣಗಳಲ್ಲಿ ಮುಂಬಡ್ತಿಯಲ್ಲಿ ಮೀಸಲಾತಿಯನ್ನು ಒದಗಿಸಲು ತೀರ್ಮಾನಿಸಿರುತ್ತದೆ.

## ಆದೇಶ

ದಿನಾಂಕ 27.4.1978ರ ಸರ್ಕಾರಿ ಆದೇಶ ಸಂಖ್ಯೆ: ಡಿಪಿಎಆರ್ 29 ಎಸ್‌ಬಿಸಿ 77ರ ಕಂಡಿಕೆ 2ರಲ್ಲಿ "such element of direct recruitment does not exceed 66 2/3%" ಎಂದಿರುವುದನ್ನು "such element of direct recruitment does not exceed 75%" ಎಂದು ಪರಿಷ್ಕರಿಸಿ ನಿಗದಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಾ: ಮಂಗಳ ಜಿ.ಎಸ್) 4/3/16
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು-1)

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು – ಇದನ್ನು ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಿಸಿ 1000 ಪ್ರತಿಗಳನ್ನು ಸಿಆಸುಇ (ಸೇವಾ ನಿಯಮಗಳು-ಎ) ನಂ. 31, ವಿಧಾನ ಸೌಧ, ಬೆಂಗಳೂರು ಇವರಿಗೆ ಒದಗಿಸಬೇಕೆಂದು ಕೋರಿದೆ.

**ಪ್ರತಿ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು,
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರು.
3. ಮುಖ್ಯ ಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು
4. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು
5. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-560 001
6. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-560 001
7. ಪ್ರಧಾನ ಮಹಾಲೇಖಪಾಲರು (ಎ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಬೆಂಗಳೂರು-560 001

8. ಎಲ್ಲಾ ಇಲಾಖಾ ಮುಖ್ಯಸ್ಥರುಗಳು/ಜಿಲ್ಲಾಧಿಕಾರಿಗಳು/ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
9. ಕಾರ್ಯದರ್ಶಿಯವರು, ಕರ್ನಾಟಕ ವಿಧಾನ ಸಭೆ/ ಕರ್ನಾಟಕ ವಿಧಾನ ಪರಿಷತ್ತು, ವಿಧಾನ ಸೌಧ, ಬೆಂಗಳೂರು-560001.
10. *ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-01
11. *ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು-560 001
12. *ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಇಂದಿರಾನಗರ, ಬೆಂಗಳೂರು-560038.
13. *ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು-560 001
14. ಶಾಖಾ ರಕ್ಷಾ ಕಡತ/ಬಿಡಿ ಪ್ರತಿಗಳು

(* ಮುಖ ಪತ್ರದೊಂದಿಗೆ)

18/3/15

18/3/15

19/3/15